2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 140/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಾಕೇಶ್ | ಪಿಡಬ್ಲೂ -03 |
| ತಂದೆಯ ಹೆಸರು | - | ಅಣ್ಣಪ್ಪ | ಸಿಡಬ್ಲೂ -05 |
| ವಯಸ್ಸು | - | 29 ವರ್ಷ | |
| ಉದ್ಯೋಗ | - | ಕೂಲಿ | |
| ವಾಸ ಸ್ಥಳ | - | ರಾಜೀವ್ ಗಾಂಧಿ ಬಡಾವಣೆ, ಚಿಕ್ಕಮಗಳೂರು | |

ದಿನಾಂಕಃ 11.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿ ಹಾಗೂ ಚಾಸಾ.1 ಗೊತ್ತು. ಚಾಸಾ.4 ಗೊತ್ತು, ಚಾಸಾ.6 ಗೊತ್ತಿಲ್ಲ.
2. ಈಗ ನೋಡುತ್ತಿರುವ ನಿಪಿ.2 ಮಹಜರಿನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.
3. ಈಗ ತೋರಿಸಿದ ಇನ್ನೊಂದು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.
4. ನಿಪಿ.2 ಮತ್ತು 5 ಮಹಜರುಗಳಿಗೆ ಸುಮಾರು 8 ವರ್ಷಗಳ ಹಿಂದೆ ಒಂದು ದಿನ ಸಖರಾಯಪಟ್ಟಣ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಿಪಿ.2 ಮತ್ತು 5 ರಲ್ಲಿ ಬರೆದ ವಿಚಾರ

ಗೊತ್ತಿಲ್ಲ. ನನ್ನೊಂದಿಗೆ ಚಾಸಾ.4 ರವರು ಕೂಡ ನಿಪಿ.2 ಮತ್ತು 5 ಕ್ಕೆ ಸಹಿ ಮಾಡಿದ್ದಾರೆ.

5. ನಾನು ಕಡೂರು ಸರ್ಕಾರಿ ಆಸ್ಪತ್ರೆಯಲ್ಲಿ ನಿಪಿ.7 ಮಹಜರಿಗೆ ಸಹಿ ಮಾಡಿದ್ದೇನೆ. ಚಾಸಾ.1 ರವರ ಮೃತ ಮಗಳನ್ನು ನೋಡಲು ನಾನು ಆಸ್ಪತ್ರೆಗೆ ಹೋದಾಗ ಪೋಲೀಸರು ನನ್ನ ಸಹಿ ಪಡೆದಿದ್ದಾರೆ. ನಿಪಿ.7 ರಲ್ಲಿ ಬರೆದ ವಿಚಾರ ಗೊತ್ತಿಲ್ಲ. ನನ್ನ ಸಮಕ್ಷಮ ಯಾರು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ.

6. ಪೋಲೀಸರು ನಾನು ಚಾಸಾ.1 ರವರೊಂದಿಗೆ ಠಾಣೆಗೆ ಹೋದಾಗ ಒಂದು ಪೋಟೋ ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.18 ಗುರುತಿಸಲಾಗಿದೆ.

7. ಈಗ ತೋರಿಸಿದ ಇನ್ನೊಂದು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.19 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು. ನಿಪಿ.19 ರ ದಾಖಲೆಗೂ ಸಹ ನಾನು ತರೀಕೆರೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಆ ಸಮಯದಲ್ಲಿ ಪೋಲೀಸರು ನಿಪಿ.20 ರಂತೆ ಪೋಟೊ ತೆಗೆದಿದ್ದರು. ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ಹಾಜರುಪಡಿಸಿದರುವುದಿಲ್ಲ. ಯಾವ ಕಾರಣಕ್ಕೆ ಚಾಸಾ.1 ರವರ ಮಗಳು ಮರಣಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

8. ದಿಃ 01.04.2019 ರಂದು ನಾನು ಕಡೂರು ಪೋಲೀಸ್ ಠಾಣೆಯಲ್ಲಿ ನಾನು ಮುಸ್ಕಾನ್ ಬಾನುವಿನ ಸಾವಿನ ಕುರಿತು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ನೀಡುವಾಗ ದಿಃ 26.02.2018 ರಂದು ಚಾಸಾ.1 ರವರ ಮಗಳಾದ ಮೃತ ಮುಸ್ಕಾನ್ ಬಾನು ಇವಳನ್ನು 1 ನೇ ಆರೋಪಿ ಗೆ ಮದುವೆ ನಿಶ್ಚಯಿಸಿ ವರದಕ್ಷಿಣೆಯಾಗಿ ಐವತ್ತು ಸಾವಿನ ನಗದು ಹಣ ಹಾಗೂ ಇಪ್ಪತ್ತು ಗ್ರಾಂ ಬಂಗಾರ ನೀಡಿ ದಿಃ 09.08.2018 ರಂದು ಮನೆಯ ಮುಂದೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

9. ಮದುವೆಯಾದ ಸುವಾರು ಮೂರು ತಿಂಗಳಿಗೆ ಮೃತಳನ್ನು ಆರೋಪಿತರು ಇನ್ನು ಹೆಚ್ಚಿಗೆ ವರದಕ್ಷಿಣೆ ತರುವಂತೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿರುತ್ತಾರೆಂದು ಚಾಸಾ.1 ರವರು ನನ್ನ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ.1 ರವರ ಕುಟುಂಬದವರು ಆರೋಪಿರಿಗೆ ಬುದ್ದಿ ಹೇಳಿ ಬಂದರೂ ಸಹ ಆರೋಪಿತರೂ ಬುದ್ದಿ ಕೇಳದೇ ಇದ್ದುದರಿಂದ ಮೃತಳನ್ನು ಚಾಸಾ.1 ರವರು ಮನೆಗೆ ಕರೆದುಕೊಂಡು ಬಂದಿದ್ದು ನಂತರ ಸಮಾಜದವರು 1 ನೇ ಆರೋಪಿಗೆ ಸಂಸಾರದಲ್ಲಿ ಹೊಂದಾಣಿಕೆ

ಮಾಡಿಕೊಂಡು ಹೋಗುವಂತೆ ಬುದ್ದಿ ಮಾತು ಹೇಳಿರುತ್ತೇವೆ ಎಂದರೆ ಸರಿಯಲ್ಲ.

10. 1 ನೇ ಆರೋಪಿ ಚಾಸಾ.1 ರವರ ಮನೆಯಲ್ಲಿ ನಾಲ್ಕು ದಿನಗಳಿದ್ದು ನಂತರ ಕುಪ್ವಾಳಿಗೆ ಮರಳಿ ಹೋಗಿ ಅಲ್ಲಿಂದ ಚಾಸಾ.1 ರವರಿಗೆ ಕರೆ ಮಾಡಿ ಇನ್ನು ಹೆಚ್ಚಿಗೆ ವರದಕ್ಷಿಣೆ ಕೊಟ್ಟಿ ಮೃತಳನ್ನು ಕುಪ್ವಾಳಿಗೆ ಕಳುಹಿಸಿಕೊಡಿ, ಇನ್ನು ಮುಂದೆ ನಾವು ಅವಳನ್ನು ಚೆನ್ನಾಗಿ ನೋಡಿಕೊಳ್ಳುತೆತೇವೆ ಎಂದು ಹೇಳಿದ್ದರಿಂದ ನಾನು, ಚಾಸಾ.1 ಹಾಗೂ ಇತರರು ಮೃತ ಮುಸ್ಕಾನ್ ಇವಳನ್ನು ಕುಪ್ವಾಳಿಗೆ ಕರೆದುಕೊಂಡು ಹೋಗಿ 1 ನೇ ಆರೋಪಿಗೆ ಇಪ್ಪತ್ತೈದು ಸಾವಿರ ವರದಕ್ಷಿಣೆ ಹಣವನ್ನು ಕೊಟ್ಟು ಬಂದಿರುತ್ತೇವೆ ಎಂದರೆ ಸರಿಯಲ್ಲ.

11. ಮದುವೆಯಾದ ನಾಲ್ಕು ತಿಂಗಳ ನಂತರ ಆರೋಪಿತರು ಹೆಚ್ಚಿನ ವರದಕ್ಷಿಣೆಗಾಗಿ ಮೃತಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುವುದು ಹೆಚ್ಚಾಗಿದ್ದರಿಂದ ಚಾಸಾ.1 ರವರು ಕುಪ್ವಾಳಿಗೆ ಹೋಗಿ ಮೃತ ಮುಸ್ಕಾನ್ ಳನ್ನು ತಮ್ಮ ಮನೆಗೆ ಕರೆದುಕೊಂಡು ಬಂದಿದ್ದು ಅಂದಿನಿಂದ ಮೃತಳು ಚಾಸಾ.1 ರವರು ಮನೆಯಲ್ಲಿದ್ದಳು ಎಂದರೆ ಸರಿಯಲ್ಲ.

12. ದಿಃ 16.03.2019 ರಂದು ಸಂಜೆ ಸುಮಾರು 5.00 ಗಂಟೆಗೆ ನನ್ನ ತಮ್ಮನ ಮಗನಾದ ಯಾಸಿನ್ ಇವರು ನನಗೆ ಕರೆ ಮಾಡಿ ಮುಸ್ನಾಕ್ ಬಾನು ತೀರಿಕೊಂಡಿರುವುದಾಗಿ ತಿಳಿಸಿದರು ಎಂದರೆ

ಸರಿಯಲ್ಲ. ನಾನು ಕುಪ್ಪಾಳಿಗೆ ಹೋಗಿ ನೋಡಿದಾಗ ಅದು ಸಂಪೂರ್ಣವಾಗಿ ಸುಟ್ಟುಹೋಗಿತ್ತು ಎಂದರೆ ಸರಿಯಲ್ಲ.

13. ನಂತರ ವಿಚಾರ ತಿಳಿಯಲಾಗಿ ದಿಃ 15.03.2019 ರಂದು ರಾತ್ರಿ ಮಸೀಲ ಮುಖಂಡರ ಸಮ್ಮುಖದಲ್ಲಿ ಪಂಚಾಯತಿ ಆಗಿದ್ದು ಆರೋಪಿತರು ಮೃತಳನ್ನು ಚೆನ್ನಾಗಿ ನೋಡಿಕೊಳ್ಳು ವುದಾಗಿ ಹೇಳಿ ಅವಳನ್ನು ಕುಪ್ಪಾಳಿಗೆ ಕರೆದುಕೊಂಡು ಹೋಗಿ ದಿಃ 16.03.2019 ರಂದು ಅವಳ ಮೇಲೆ ಸೀಮೆಎಣ್ಣೆ ಎರಚಿ ಬೆಂಕಿ ಹಚ್ಚಿ ಕೊಲೆ ಮಾಡಿರುತ್ತಾರೆಂದು ಈಗ ಓದಿ ಹೇಳಿದಂತೆ ನಿಪಿ.31 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

14. ನಂತರ ದಿಃ 16.05.2019 ರಂದು ಪೋಲೀಸರು ತರೀಕೆರೆ ಡಿ.ವೈ.ಎಸ್.ಪಿ. ಕಚೇರಿಯಲ್ಲಿ ನಿಪಿ.7 ರಂತೆ ಮಹಜರು ಮಾಡಿ ಚಾಸಾ.1 ರವರು ಹಾಜರುಪಡಿಸಿದ ನಿಪಿ.8 ರಿಂದ 17 ರ ದಾಖಲೆಗಳನ್ನು ಅಮಾನತುಪಡಿಸಿಕೊಂಡು ಎಂದರೆ ನನಗೆ ಗೊತ್ತಿಲ್ಲ. ಅದೇ ಸಮಯದಲ್ಲಿ ನಿಪಿ.18 ರ ಪೋಟೋ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

15. ನಂತರ ದಿಃ 27.05.2019 ರಂದು ಪೋಲೀಸರು ತರೀಕೆರೆ ಡಿ.ವೈ.ಎಸ್.ಪಿ. ಕಚೇರಿಯಲ್ಲಿ ನಿಪಿ.19 ರಂತೆ ಮಹಜರು ಮಾಡಿ ಚಾಸಾ.1 ರವರು ಹಾಜರುಪಡಿಸಿದ ನಿಪಿ.21 ಸಾಲ ಮಂಜೂರಾತಿ ಅರ್ಜಿ, ನಿಪಿ.22 ಬಂಗಾರದ ರಸೀತಿಗಳನ್ನು ಅಮಾನತುಪಡಿಸಿಕೊಂಡು, ನಿಪಿ.25 ರ ಪೋಟೋ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

16. ಮಹಜರುಗಳಿಗೆ ಸಹಿ ಮಾಡಿ ಪೋಲೀಸರಲ್ಲಿ ನಿಪಿ.31 ರಂತೆ ಹೇಳಿಕೆ ನೀಡಿದ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ